೨. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್, 2000 ದಂದು ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ವರದಿಯನ್ನು (ರಾಜಸ್ವ ಸ್ವೀಕೃತಿಗಳು) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

I ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿ) ಅವರು: ಸನ್ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೭೮ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ೮(೩)ರ ಪ್ರಕರಣದ ಮೇರೆಗೆ;

1. 1994ನೇ ಸಾಲಿನ ಕರ್ನಾಟಕ ರಾಜ್ಯ ಪೋಲೀಸ್ ಸೇವೆಗಳು ಲಿಪಿಕ ಹುದ್ದೆಗಳನ್ನು ಒಳಗೊಂಡಂತೆ (ನೇಮಕಾತಿ) (ತಿದ್ದುಪಡಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 05.01.2001ರಂದು ಹೊರಡಿಸಲಾದ ಡಿಪಿಎಆರ್:26: ಎಸ್ಆರ್ಡಿ: 2000ನೇ ಸಂಖ್ಯೆಯ ಅಧಿಸೂಚನೆ,

2. 1985ರ ಕರ್ನಾಟಕ ನಾಗರೀಕ ಸೇವೆಗಳ (ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು 'ಎ' ಮತ್ತು ಗುಂಪು 'ಬಿ' ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 05.03.2001ರಂದು ಹೊರಡಿಸಲಾದ ಡಿಪಿಎಆರ್:11:ಎಸ್ಬಿಸಿ:2000ನೇ ಸಂಖ್ಯೆ ಅಧಿಸೂಚನೆ,

3. ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) ನಿಯಮಗಳು 1985ಕ್ಕೆ ತಿದ್ದುಪಡಿ ಮಾಡಿ ದಿನಾಂಕ 09.03.2001 ರಂದು ಹೊರಡಿಸಲಾದ ಡಿಪಿಎಆರ್:26:ಎಸ್ಆರ್ಡಿ:99ನೇ ಸಂಖ್ಯೆಯ ಅಧಿ ಸೂಚನೆ;

4. ರಾಜ್ಯಪಾಲರ ಸಚಿವಾಲಯದ ಸೇವೆಗಳ (ವೃಂದ ಮತ್ತು ನೇಮಕಾತಿ) ನಿಯಮಗಳು) 1995ಕ್ಕೆ ತಿದ್ದುಪಡಿ ಮಾಡಿ ದಿನಾಂಕ 16.03.2001ರಂದು ಹೊರಡಿಸಲಾದ ಡಿಪಿಎಆರ್:90ಎಸ್ಆರ್ಇ:2000ನೇ ಸಂಖ್ಯೆ ಅಧಿಸೂಚನೆ;

5. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ಕ್ಕೆ ತಿದ್ದುಪಡಿ ಮಾಡಿ ದಿನಾಂಕ 31.01.2001ರಂದು

ಹೊರಡಿಸಲಾದ ಡಿಪಿಎಆರ್:10:ಎಸ್‌ಡಿಇ:2000ನೇ ಸಂಖ್ಯೆಯ ಅಧಿಸೂಚನೆ;

6. ಸರ್ಕಾರಿ ನೌಕರರು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಲು ಖಾಸಗಿ ಆಸ್ಪತ್ರೆಗಳನ್ನು ಗುರುತಿಸುವ ಸಂಬಂಧದಲ್ಲಿ 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 22.01.2001ರಂದು ಹೊರಡಿಸಲಾದ ಡಿಪಿಎಆರ್: 1:ಎಸ್‌ಎಂಆರ್:2000ನೇ ಸಂಖ್ಯೆಯ ಅಧಿಸೂಚನೆ;

7. ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ಮತ್ತು ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) (ಹತ್ತನೇ ತಿದ್ದುಪಡಿ) ನಿಯಮಗಳನ್ನು ರಚಿಸಿ ದಿನಾಂಕ 29.06.2000ರಂದು ಹೊರಡಿಸಲಾದ ಡಿಪಿಎಆರ್:61:ಎಸ್‌ಆರ್‌ಡಿ:97(2)ನೇ ಸಂಖ್ಯೆಯ ಅಧಿಸೂಚನೆ;

8. ಕರ್ನಾಟಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು (ವಿಶೇಷ ನೇಮಕಾತಿ) ನಿಯಮಗಳು 2001 ಅನ್ನು ರಚಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಡಿಪಿಎಆರ್:19:ಎಸ್‌ಆರ್‌ಡಿ:98ನೇ ಸಂಖ್ಯೆಯ ಅಧಿಸೂಚನೆ;

9. ಕರ್ನಾಟಕ ನಾಗರೀಕ ಸೇವೆಗಳು (ಕೋಮು ಗಲಭೆಗಳಲ್ಲಿ ಮೃತರಾದವರ ಕುಟುಂಬ ಸದಸ್ಯರ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) ನಿಯಮಗಳು, 1993ಕ್ಕೆ ತಿದ್ದುಪಡಿ ಮಾಡಿ ದಿನಾಂಕ 05.02.2001ರಂದು ಹೊರಡಿಸಲಾದ ಡಿಪಿಎಆರ್:29:ಎಸ್‌ಸಿಎ:96ನೇ ಸಂಖ್ಯೆಯ ಅಧಿಸೂಚನೆ;

10. 1996ರ ಕರ್ನಾಟಕ ರಾಜ್ಯ ರಿಸರ್ವ್ ಪೋಲೀಸ್ (ನೇಮಕಾತಿ ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 16.03.2001ರಂದು ಹೊರಡಿಸಲಾದ ಡಿಪಿಎಆರ್:88:ಎಸ್‌ಆರ್‌ಡಿ:96ನೇ ಸಂಖ್ಯೆಯ ಅಧಿಸೂಚನೆ;

11. ಕರ್ನಾಟಕ ವಾರ್ತಾ ಮತ್ತು ಪ್ರಚಾರ ಸೇವೆಗಳು (ನೇಮಕಾತಿ) ನಿಯಮಗಳು 1978ಕ್ಕೆ ತಿದ್ದುಪಡಿ ಮಾಡಿ ದಿನಾಂಕ 16.06.2001ರಂದು ಹೊರಡಿಸಲಾದ ಡಿಪಿಎಆರ್:82:ಎಸ್‌ಆರ್‌ಇ:2000ನೇ ಸಂಖ್ಯೆಯ ಅಧಿಸೂಚನೆ;

12. 1957ರ ಕರ್ನಾಟಕ ಆಡಳಿತ ಸೇವೆಗಳು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಕರ್ನಾಟಕ ಆಡಳಿತ ಸೇವೆ ಗ್ರೂಪ್-ಬಿ (ಕಿರಿಯ ಶ್ರೇಣಿ) ವೃಂದದಲ್ಲಿರುವ 50 ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ಬಡ್ತಿ ರಿಕ್ತ ಸ್ಥಾನಗಳಾಗಿ

ಪರಿವರ್ತಿಸಿರುವ ಸಂಬಂಧದಲ್ಲಿ ದಿನಾಂಕ 15.06.2001 ರಂದು ಹೊರಡಿಸಲಾದ ಡಿಪಿಎಆರ್:10:ಎಸ್ಆರ್ಇ:2000ನೇ ಸಂಖ್ಯೆ ಅಧಿಸೂಚನೆ;

13. 1978ರ ಕರ್ನಾಟಕ ತೂಕ ಮತ್ತು ಅಳತೆ ಸೇವೆಗಳು (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ಕಾನೂನು ಮಾಪನ ಇಲಾಖೆಯ ಸಹಾಯಕ ನಿಬಂಧಕರ ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ಬಡ್ತಿ ರಿಕ್ತ ಸ್ಥಾನಗಳಾಗಿ ಪರಿವರ್ತಿಸಿರುವ ಸಂಬಂಧದಲ್ಲಿ ದಿನಾಂಕ 15.06.2001ರಂದು ಹೊರಡಿಸಲಾದ ಡಿಪಿಎಆರ್:80:ಎಸ್ಆರ್ಇ:2000ನೇ ಸಂಖ್ಯೆ ಅಧಿಸೂಚನೆ;

14. ಕರ್ನಾಟಕ ರಾಜ್ಯ ರಿಸರ್ವ್ ಪೋಲೀಸ (ರಿಕ್ರೂಟ್‌ಮೆಂಟ್ ಅಂಡ್ ಕಂಡೀಷನ್ಸ್ ಆಫ್ ಸರ್ವೀಸ್) ನಿಯಮಗಳು 1974ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.06.2001ರಂದು ಹೊರಡಿಸಲಾದ ಡಿಪಿಎಆರ್:40:ಎಸ್ಆರ್ಇ:2000ನೇ ಸಂಖ್ಯೆ ಅಧಿಸೂಚನೆ;

15. ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು 1967ಕ್ಕೆ ತಿದ್ದುಪಡಿ ಮಾಡಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿಗಳ ನೇರ ನೇಮಕಾತಿ ಪದ್ಧತಿಗಳನ್ನು ಸ್ಥಗಿತಗೊಳಿಸುವ ಸಂಬಂಧದಲ್ಲಿ ದಿನಾಂಕ 12.06.2001ರಂದು ಹೊರಡಿಸಲಾದ ಡಿಪಿಎಆರ್:68:ಎಸ್ಆರ್ಇ:2000ನೇ ಸಂಖ್ಯೆಯ ಅಧಿಸೂಚನೆ;

೧೯೫೭ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೫೯ರ ಪ್ರಕರಣದ ಮೇರೆಗೆ:

16. ಬೀರ್ ಒಳಗೊಂಡಂತೆ ಲಿಕ್ಕರ್, ಫೆನ್ನಿ ವೈನ್ ಮತ್ತು ಲಿಕ್ವಿಯರ್ ಹಾಗೂ ಹೊರ ದೇಶದಿಂದ ಆಮದು ಮಾಡಿಕೊಂಡ ಲಿಕ್ಕರ್ ಇವುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ಹೆಚ್ಚುವರಿ ಅಬಕಾರಿ ಸುಂಕಕ್ಕೆ ಷರತ್ತಿನ ಮೇಲೆ ದಿನಾಂಕ 16.02.2001 ರಿಂದ ಜಾರಿಗೆ ಬರುವಂತೆ ಏನಾಯಿತಿ ನೀಡಿ ದಿನಾಂಕ 15.02.2001ರಂದು ಹೊರಡಿಸಲಾದ ಎಫ್‌ಡಿ:40:ಸಿಎಸ್ಎಲ್:2001(1)ನೇ ಸಂಖ್ಯೆಯ ಅಧಿಸೂಚನೆ;

17. ಬೀರ್ ಒಳಗೊಂಡಂತೆ ಲಿಕ್ಕರ್, ಫೆನ್ನಿ ವೈನ ಮತ್ತು ಲಿಕ್ವಿಯರ್, ರೆಕ್ಟಿಫೈಡ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಎಥೈಲ್ ಆಲ್ಕೋಹಾಲ್ ಇವುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ಹೆಚ್ಚುವರಿ ಅಬಕಾರಿ ಸುಂಕಕ್ಕೆ ಷರತ್ತಿನ ಮೇಲೆ ದಿನಾಂಕ 16.02.2001 ರಿಂದ ಜಾರಿಗೆ ಬರುವಂತೆ ಏನಾಯಿತಿ ನೀಡಿ ದಿನಾಂಕ 15.02.2001ರಂದು ಹೊರಡಿಸಲಾದ ಎಫ್‌ಡಿ:40:ಸಿಎಸ್ಎಲ್:2001(3)ನೇ ಸಂಖ್ಯೆ ಅಧಿಸೂಚನೆ;

18. ರೆಕ್ಟಿಫೈಡ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಎತ್ಯಲ್ ಆಲ್ಕೋಹಾಲ್ ಇವುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ಪರಿಷ್ಕೃತ ತೆರಿಗೆಗೆ ಅಬಕಾರಿ ಷರತ್ತಿನ ಮೇಲೆ ದಿನಾಂಕ 16.02.2001 ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 15.02.2001ರಂದು ಹೊರಡಿಸಲಾದ ಎಫ್ ಡಿ:40:ಸಿಎಸ್ ಎಲ್:2001(4)ನೇ ಸಂಖ್ಯೆಯ ಅಧಿಸೂಚನೆ;

19. ಮೈಸೂರಿನ ಮೆ: ವಿಕ್ರಾಂತ್ ಟೈರ್ಸ್ ಲಿಮಿಟೆಡ್‌ನವರು ಹೆಚ್ಚುವರಿ ಸಾಮರ್ಥ್ಯದಿಂದ ತಯಾರಿಸಲಾದ ಟೈರ್‌ಗಳ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ 10 ವರ್ಷಗಳ ಕಾಲ (ವಿನಾಯಿತಿ ಪ್ರಕರಣದಲ್ಲಿ) ಅಥವಾ 12 ವರ್ಷಗಳ ಕಾಲ (ಮುಂದೂಡುವ ಪ್ರಕರಣದಲ್ಲಿ) ಕೆಲವು ಷರತ್ತುಗಳ ಮೇಲೆ ವಿನಾಯಿತಿ ನೀಡಿ ಅಥವಾ ಮುಂದೂಡಿ ದಿನಾಂಕ 12.03.2001ರಂದು ಹೊರಡಿಸಲಾದ ಎಫ್ ಡಿ:266:ಸಿಎಸ್ ಎಲ್:2000(1)ನೇ ಮತ್ತು ಎಫ್ ಡಿ:266:ಸಿಎಸ್ ಎಲ್: 2000(2)ನೇ ಸಂಖ್ಯೆ ಅಧಿಸೂಚನೆ;

20. 2001 ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್ ಡಿ:97 ಸಿಎಸ್ ಎಲ್:2001(1)ನೇ ಸಂಖ್ಯೆಯ ಅಧಿಸೂಚನೆ;

1. ಎಫ್ ಡಿ:130:ಸಿಎಸ್ ಎಲ್:91, ದಿನಾಂಕ 28.10.1989

2. ಎಫ್ ಡಿ:135:ಸಿಎಸ್ ಎಲ್:92(1), ದಿನಾಂಕ 05.06.1992

3. ಎಫ್ ಡಿ:200:ಸಿಎಸ್ ಎಲ್:92(1), ದಿನಾಂಕ 04.02.1993

4. ಎಫ್ ಡಿ:200:ಸಿಎಸ್ ಎಲ್:92(11), ದಿನಾಂಕ 04.02.1993

5. ಎಫ್ ಡಿ:200:ಸಿಎಸ್ ಎಲ್:92(111), ದಿನಾಂಕ 04.02.1993

6. ಎಫ್ ಡಿ:49:ಸಿಎಸ್ ಎಲ್:95(23), ದಿನಾಂಕ 31.03.1995

7. ಎಫ್ ಡಿ:162:ಸಿಎಸ್ ಎಲ್:94(111), ದಿನಾಂಕ 12.06.1996

8. ಎಫ್ ಡಿ:108:ಸಿಎಸ್ ಎಲ್:96, ದಿನಾಂಕ 19.12.1996

9. ಎಫ್ ಡಿ:129:ಸಿಎಸ್ ಎಲ್:96(1), ದಿನಾಂಕ 09.01.1997

10. ಎಫ್ ಡಿ:86:ಸಿಎಸ್ ಎಲ್:99(10), ದಿನಾಂಕ 31.03.1999

11. ಎಫ್ ಡಿ:86:ಸಿಎಸ್ ಎಲ್:99(22), ದಿನಾಂಕ 31.03.1999

12. ಎಫ್ ಡಿ:95:ಸಿಎಸ್ ಎಲ್:99, ದಿನಾಂಕ 15.06.1999

13. ಎಫ್ ಡಿ:135:ಸಿಎಸ್ ಎಲ್:99(1), ದಿನಾಂಕ 07.10.1999

14. ಎಫ್ ಡಿ:115:ಸಿಎಸ್ ಎಲ್:2000(2), ದಿನಾಂಕ 31.03.2000

15. ಎಫ್ ಡಿ:115:ಸಿಎಸ್ ಎಲ್:2000(3), ದಿನಾಂಕ 31.03.2000

16. ಎಫ್ ಡಿ:115:ಸಿಎಸ್ ಎಲ್:2000(6), ದಿನಾಂಕ 31.03.2000

17. ಎಫ್ ಡಿ:115:ಸಿಎಸ್ ಎಲ್:2000(10), ದಿನಾಂಕ 31.03.2000

18. ಎಫ್ ಡಿ:115:ಸಿಎಸ್ ಎಲ್:2000(11), ದಿನಾಂಕ 31.03.2000

19. ಎಫ್ ಡಿ:115:ಸಿಎಸ್ ಎಲ್:2000(12), ದಿನಾಂಕ 31.03.2000

20. ಎಫ್ ಡಿ:115:ಸಿಎಸ್ ಎಲ್:2000(13), ದಿನಾಂಕ 31.03.2000

21. ಎಫ್ ಡಿ:115:ಸಿಎಸ್ ಎಲ್:2000(17), ದಿನಾಂಕ 31.03.2000

22. ಎಫ್ ಡಿ:115:ಸಿಎಸ್ ಎಲ್:2000(18), ದಿನಾಂಕ 31.03.2000

23. ಎಫ್ ಡಿ:115:ಸಿಎಸ್ ಎಲ್:2000(19), ದಿನಾಂಕ 31.03.2000

24. ಎಫ್ ಡಿ:115:ಸಿಎಸ್ ಎಲ್:2000(20), ದಿನಾಂಕ 31.03.2000

25. ಎಫ್ ಡಿ:115:ಸಿಎಸ್ ಎಲ್:2000(23), ದಿನಾಂಕ 31.03.2000

26. ಎಫ್ ಡಿ:115:ಸಿಎಸ್ ಎಲ್:2000(25), ದಿನಾಂಕ 31.03.2000

27. ಎಫ್ ಡಿ:48:ಸಿಎಸ್ ಎಲ್:2000(1), ದಿನಾಂಕ 18.07.2000

28. ಎಫ್ ಡಿ:48:ಸಿಎಸ್ ಎಲ್:2000(2), ದಿನಾಂಕ 18.07.2000

29. ಎಫ್ ಡಿ:154:ಸಿಎಸ್ ಎಲ್:2000, ದಿನಾಂಕ 15.11.2000

30. ಎಫ್ ಡಿ:71:ಸಿಎಸ್ ಎಲ್:2000, ದಿನಾಂಕ 07.12.2000

31. ಎಫ್ ಡಿ:298:ಸಿಎಸ್ ಎಲ್:2000, ದಿನಾಂಕ 16.12.2000

32. ಎಫ್.ಡಿ:135:ಸಿಎಸ್.ಎಲ್:2000(2), ದಿನಾಂಕ 29.04.2000

33. ಎಫ್.ಡಿ:135:ಸಿಎಸ್.ಎಲ್:2000(3), ದಿನಾಂಕ 29.04.2000

21. ಅಲ್ಯೂಮಿನಿಯಂ, ನಿತ್ಯೋಪಯೋಗಿ ಸಾಮಾನುಗಳು ಮತ್ತಿತರ ಸರಕುಗಳ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್.ಡಿ:97:ಸಿಎಸ್.ಎಲ್:2001(2)ನೇ ಸಂಖ್ಯೆಯ ಅಧಿಸೂಚನೆ;

22. ಕೈಗಾರಿಕಾ ಘಟಕದಲ್ಲಿ ಉಪಯೋಗಿಸುವ ಡೀಸೆಲ್, ಹಗುರ ಡೀಸೆಲ್ ಎಣ್ಣೆ ಕುಲುಮೆ ಎಣ್ಣೆ ಮತ್ತಿತರ ವಸ್ತುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು 2001 ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್.ಡಿ:97:ಸಿಎಸ್.ಎಲ್:2001(3)ನೇ ಸಂಖ್ಯೆಯ ಅಧಿಸೂಚನೆ;

23. ಭತ್ತದ ಹೊಟ್ಟು ಕಡಲೆಕಾಯಿ ಹೊಟ್ಟು ಮತ್ತು ಕಾಫಿ ಹೊಟ್ಟು ಮತ್ತಿತರ ಸರಕುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್.ಡಿ:97:ಸಿಎಸ್.ಎಲ್:2001(4)ನೇ ಸಂಖ್ಯೆಯ ಅಧಿಸೂಚನೆ;

24. ಪ್ರಾಣಿಗಳ ಆಹಾರ, ಬೈಸಿಕಲ್, ಮೇಣದ ಬತ್ತಿ ಹಾಗೂ ಮತ್ತಿತರ ಸರಕುಗಳ ಮಾರಾಟ ಅಥವಾ ಖರೀದಿಯ ವಹಿವಾಟಿನ ಮೇಲೆ ಮೊದಲನೇ ಅಥವಾ ನಂತರದ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್.ಡಿ:97:ಸಿಎಸ್.ಎಲ್:2001(5)ನೇ ಸಂಖ್ಯೆಯ ಅಧಿಸೂಚನೆ;

25. ಅಡಿಕೆ, ಹೈಸ್ಪೀಡ್ ಡೀಸೆಲ್, ಸೀಮೆಎಣ್ಣೆ ಮುಂತಾದ ಪೆಟ್ರೋಲಿಯಂ ಸರಕುಗಳ ಎರಡನೇ ಮತ್ತು ಅನಂತರದ ಮಾರಾಟದಲ್ಲಿ ವ್ಯಾಪಾರದ ಮೊತ್ತಕ್ಕೆ ಸಂಬಂಧಿಸಿದಂತೆ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್.ಡಿ:97:ಸಿಎಸ್.ಎಲ್:2001(6)ನೇ ಸಂಖ್ಯೆಯ ಅಧಿಸೂಚನೆ;

26. ಎಲೆಕ್ಟ್ರಾನಿಕ್ ಮೋಟಾರುಗಳು ಮತ್ತು ಎಣ್ಣೆಯ ಚಾಲಕ ಯಂತ್ರಗಳನ್ನು ಹೊರತು ಪಡಿಸಿ ಕೃಷಿ ಮತ್ತು ತೋಟಗಾರಿಕೆಯ ಸ್ಪ್ರಿಂಕಲರ್ಸ್ ಮತ್ತು ಹನಿ ನೀರಾವರಿಯ

ಉಪಕರಣಗಳು ಮತ್ತು ಅದರ ಭಾಗಗಳು ಹಾಗೂ ಮತ್ತಿತರ ವಸ್ತುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ವಹಿವಾಟಿನ ತೆರಿಗೆಗೆ 2001 ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(7)ನೇ ಸಂಖ್ಯೆಯ ಅಧಿಸೂಚನೆ;

27. ಬಟ್ಟೆಗಳಿಗೆ ಮುದ್ರಣ ಮತ್ತು ಬಣ್ಣ ಹಾಕುವುದು, ಪತ್ಯ ಪುಸ್ತಕಗಳ ಮುದ್ರಣ, ಹತ್ತಿಯ ಬಟ್ಟೆಗೆ ಬಣ್ಣ ಹಾಕುವ ಕೆಲಸದ ಗುತ್ತಿಗೆಯಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಲಾದ ಎಫ್‌ಡಿ:97:ಸಿಎಸ್‌ಎಲ್: 2001(8)ನೇ ಸಂಖ್ಯೆಯ ಅಧಿಸೂಚನೆ;

28. ಕಂಪ್ಯೂಟರ್ ಸಾಫ್ಟ್‌ವೇರ್‌ನಲ್ಲಿ ಒದಗಿಸುವ ಕಾರ್ಯಕ್ರಮದ ಗುತ್ತಿಗೆ ಕೆಲಸದಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 4ಕ್ಕೆ ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(9)ನೇ ಸಂಖ್ಯೆ ಅಧಿಸೂಚನೆ;

29. ಭಾರತದಲ್ಲಿ ತಯಾರಿಸಲಾದ (ಬೀರ್ ಹೊರತುಪಡಿಸಿ) ಲಿಕ್ಕರ್ ಎರಡನೇ ಮತ್ತು ಅನಂತರದ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ವಹಿವಾಟು ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(10)ನೇ ಸಂಖ್ಯೆಯ ಅಧಿಸೂಚನೆ;

30. ಪ್ಲೈವುಡ್ ಮತ್ತು ಕಪ್ಪು ಬೋರ್ಡ್‌ಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುವ ಫೈರ್‌ವುಡ್ ಮತ್ತು ಇತರೆ ಸಾಫ್ಟ್‌ವುಡ್ ಖರೀದಿಯಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 4 ರಷ್ಟು ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್: 2001(11)ನೇ ಸಂಖ್ಯೆಯ ಅಧಿಸೂಚನೆ;

31. ಪ್ಲೈವುಡ್ ಮತ್ತು ಕಪ್ಪು ಬೋರ್ಡ್‌ಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುವ ಫೈರ್‌ವುಡ್ ಮತ್ತು ಇತರೆ ಸಾಫ್ಟ್‌ವುಡ್ ಮಾರಾಟದಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ ಕೆಲವು ಷರತ್ತಿನ ಮೇಲೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 4ರಷ್ಟು ಕಡಿಮೆಗೊಳಿಸಿ ದಿನಾಂಕ

31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(12) ನೇ ಸಂಖ್ಯೆಯ ಅಧಿಸೂಚನೆ;

32. ಇಂಡಿಯನ್ ರೈಲ್ವೆಗೆ ಡೀಸೆಲ್ ಮಾರಾಟ ಮಾಡುವ ಸಂಬಂಧದಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ ಕೆಲವು ಷರತ್ತಿನ ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡ 4 ರಷ್ಟು ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(13)ನೇ ಸಂಖ್ಯೆ ಅಧಿಸೂಚನೆ;

33. ದೇಶದೊಳಗೆ ಹಾಗೂ ದೇಶದ ಹೊರಗೆ ಸಮುದ್ರ ಸಂಚಾರ ಮಾಡುವ ಹಡಗುಗಳಲ್ಲಿ ಉಪಯೋಗಿಸುವ ಕುಲುಮೆ ಎಣ್ಣೆಯ ಮಾರಾಟದಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೆಲವು ಷರತ್ತಿನ ಮೇಲೆ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(14)ನೇ ಸಂಖ್ಯೆಯ ಅಧಿಸೂಚನೆ;

34. ಕಬ್ಬಿನ ಖರೀದಿಯಲ್ಲಿ (ಖಂಡಾಸರಿ ಸಕ್ಕರೆ ಒಳಗೊಂಡಂತೆ) ಸಕ್ಕರೆ ತಯಾರಕರು ಪಾವತಿಸಬೇಕಾದ ತೆರಿಗೆ ಮತ್ತು ಉಪಕರವನ್ನು 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(15)ನೇ ಸಂಖ್ಯೆ ಅಧಿಸೂಚನೆ;

35. ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರ ಕಛೇರಿಯಲ್ಲಿ ನೋಂದಾಯಿಸಿರುವ ಸಣ್ಣ ಪ್ರಮಾಣದ ಕೈಗಾರಿಕೆ ಘಟಕಗಳು, ರೂ.25 ಲಕ್ಷಗಳವರೆಗಿನ ವಹಿವಾಟಿನ ಮೇಲೆ ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2001 ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(16)ನೇ ಸಂಖ್ಯೆಯ ಅಧಿಸೂಚನೆ;

36. ಸಿಮೆಂಟ್, ಕಾಂಕ್ರೀಟ್ ಮಿಕ್ಸರ್ ಹೊರತುಪಡಿಸಿ ಸಿಮೆಂಟ್ ಬಳಸಿ ತಯಾರಿಸುವ ಸರಕುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001 (17)ನೇ ಸಂಖ್ಯೆ ಅಧಿಸೂಚನೆ;

37. ಕಾಫಿ ಬೀನ್ಸ್ ಮತ್ತು ಕಾಫೀ ಬೀಜಗಳು (ಕಚ್ಚಾ ಅಥವಾ ಸಿದ್ಧವಾಗಿರುವ) ಖರೀದಿಯಲ್ಲಿ ಕಾಫಿ ಕ್ಯೂರರ್ ಪಾವತಿ ಮಾಡುವ ತೆರಿಗೆಯಲ್ಲಿ 2001ರ ಏಪ್ರಿಲ್

ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 4ರಷ್ಟು ಕಡಿಮೆಗೊಳಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(18)ನೇ ಸಂಖ್ಯೆಯ ಅಧಿಸೂಚನೆ;

38. ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದಲ್ಲಿ ಕಲರ್ ಟೆಲಿವಿಷನ್ ಸೆಟ್ಸ್, ಕುಕಿಂಗ್ ರೇಂಜಸ್, ಡಿಜಿಟಲ್ ವಿಡಿಯೋ ಡಿಸ್ಕ್ ಪ್ಲೇಯರ್ಸ್, ಗ್ಯಾಸ್ ಟೇಬಲ್ಸ್, ಸ್ಪೀಕರ್ ಸಿಸ್ಟಮ್ಸ್‌ನ ಸರಕುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ನಮೂನೆ 'ಸಿ' ಲಗತ್ತಿಸುವ ಷರತ್ತಿನ ಮೇಲೆ ಶೇಕಡ 2ಕ್ಕೆ ನಿಗಧಿಪಡಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97: ಸಿಎಸ್‌ಎಲ್: 2001(19)ನೇ ಸಂಖ್ಯೆ ಅಧಿಸೂಚನೆ;

39. ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದಲ್ಲಿ ಮೈಜಿ ಹೈಡ್ರೋಲ್ ಮತ್ತು ಮೈಜಿ ಜಮ್ರ್ಸ್ ಹಾಗೂ ಎಣ್ಣೆ ಬೀಜಗಳು ಮತ್ತಿತರ ಸರಕುಗಳ ಮಾರಾಟದಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 2ಕ್ಕೆ ನಿಗಧಿಪಡಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001 (20)ನೇ ಸಂಖ್ಯೆ ಅಧಿಸೂಚನೆ;

40. ಭಾರತ ಸಂಚಾರ ನಿಗಮ ನಿಯಮಿತದವರಿಗೆ ಮಾರಾಟ ಮಾಡಿರುವ ಎಲ್ಲಾ ವಿಧವಾದ ದೂರವಾಣಿಗಳು ಮತ್ತು ಅವುಗಳ ಭಾಗಗಳ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಕೆಲವು ಷರತ್ತುಗಳ ಮೇಲೆ ಶೇಕಡ 4ರಂತೆ ಲೆಕ್ಕ ಹಾಕುವಂತೆ ನಿರ್ದೇಶನಗಳನ್ನು ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:97:ಸಿಎಸ್‌ಎಲ್:2001(21)ನೇ ಸಂಖ್ಯೆಯ ಅಧಿಸೂಚನೆ;

41. ದಿನಾಂಕ 05.06.2000ದ ಎಫ್‌ಡಿ:187:ಸಿಎಸ್‌ಎಲ್:2000(111)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 28.03.2001ರಂದು ಹೊರಡಿಸಲಾದ ಎಫ್‌ಡಿ:187:ಸಿಎಸ್‌ಎಲ್:2000(1)ನೇ ಸಂಖ್ಯೆಯ ಅಧಿಸೂಚನೆ;

42. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಮೆ: ಶ್ರೀ ಸತ್ಯಸಾಯಿ ಹೈಯರ್ ಮೆಡಿಕಲ್ ಸೈನ್ಸಸ್ ಸಂಸ್ಥೆಗೆ ಸಂಬಂಧಿಸಿದಂತೆ ಔಷಧಿಗಳು, ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಯೋಗ್ಯವಾದ ಸರಕುಗಳು, ಪ್ರಯೋಗಾಲಯ ಮತ್ತಿತರ ಸರಕುಗಳ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 21.03.2001ರಂದು

ಹೊರಡಿಸಲಾದ ಎಫ್‌ಡಿ:25:ಸಿಎಸ್‌ಎಲ್:2001(1)ನೇ ಸಂಖ್ಯೆಯ ಅಧಿಸೂಚನೆ;

೧೯೭೯ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ೩೧ರ ಪ್ರಕರಣದ ಮೇರೆಗೆ

43. ರೆಕ್ಟಿಫೈಡ್ ಸ್ಪಿರಿಟ್, ನ್ಯೂಟ್ರಲ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಎತೈಲ್ ಆಲ್ಕೋಹಾಲ್ ಇವುಗಳ ಪ್ರವೇಶದಲ್ಲಿ ವರ್ತಕರು ಪಾವತಿಸಬೇಕಾದ ಹೆಚ್ಚುವರಿ ಅಬಕಾರಿ ಸುಂಕಕ್ಕೆ ಷರತ್ತಿನ ಮೇಲೆ ದಿನಾಂಕ 16.02.2001ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 15.02.2001ರಂದು ಹೊರಡಿಸಲಾದ ಎಫ್‌ಡಿ: 40:ಸಿಎಸ್‌ಎಲ್:2001(2)ನೇ ಸಂಖ್ಯೆಯ ಅಧಿಸೂಚನೆ;

44. ಸಿದ್ಧವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುವ ಪ್ಯಾಕಿಂಗ್ ಸಾಧನ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳಾದ ಡೀಸೆಲ್ ಮತ್ತು ಕುಲುಮೆ ಎಣ್ಣೆ ಹೊರತುಪಡಿಸಿ) ಕನ್‌ಸ್ಯೂಮಬಲ್ಸ್, ಕಾಂಪೊನೆಂಟ್ಸ್, ಕಚ್ಚಾ ಸಾಮಗ್ರಿಗಳ ಪ್ರವೇಶದ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಅಧಿಸೂಚನೆ ಎಫ್‌ಡಿ:266:ಸಿಎಸ್‌ಎಲ್:2001(1) ದಿನಾಂಕ 12.03.2001ರಲ್ಲಿ ಸೂಚಿಸಿರುವ ಕೆಲವು ಷರತ್ತುಗಳನ್ನೊಳಗೊಂಡಂತೆ ವಿನಾಯಿತಿ ನೀಡಿ ದಿನಾಂಕ 12.03.2001ರಂದು ಹೊರಡಿಸಲಾದ ಎಫ್‌ಡಿ:266:ಸಿಎಸ್‌ಎಲ್:2000(3)ನೇ ಸಂಖ್ಯೆಯ ಅಧಿಸೂಚನೆ;

45. ಸ್ಥಳೀಯ ಪ್ರದೇಶದಲ್ಲಿ ಉಪಯೋಗ ಅಥವಾ ಮಾರಾಟವಾಗುವ ಹತ್ತಿ ಉಣ್ಣೆ ರೇಷ್ಮೆ ಅಥವಾ ಕೃತಕ ರೇಷ್ಮೆ ಮತ್ತಿತರ ಸರಕುಗಳ ಪ್ರವೇಶದಲ್ಲಿ ಸಂಗ್ರಹಿಸುವ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ಶೇಕಡ 2ರಷ್ಟು ನಿಗದಿಪಡಿಸಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:23:2001ರ ಅಧಿಸೂಚನೆ.

46. ಹೊಸ ಕೈಗಾರಿಕಾ ಘಟಕದ ಖರೀದಿ ಪಟ್ಟಿಯಲ್ಲಿ 25 ಲಕ್ಷಕ್ಕೂ ಹೆಚ್ಚು ಬೆಲೆಯುಳ್ಳ ಯಂತ್ರಗಳು: ಉಪಕರಣಗಳ ಸರಕುಗಳ ಪ್ರವೇಶದಲ್ಲಿ ಪಾವತಿಸಬೇಕಾದ ತೆರಿಗೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಅಧಿಸೂಚನೆ ಸಂಖ್ಯೆ: ಎಫ್‌ಡಿ: 187:ಸಿಎಸ್‌ಎಲ್: 2001(1) ದಿನಾಂಕ 05.06.2000ದಲ್ಲಿ ಸೂಚಿಸಿರುವ ನಿಬಂಧನೆಗಳು ಮತ್ತು ಷರತ್ತುಗಳನ್ನೊಳಗೊಂಡಂತೆ ವಿನಾಯಿತಿ ನೀಡಿ ದಿನಾಂಕ 28.03.2001ರಂದು ಹೊರಡಿಸಲಾದ ಎಫ್‌ಡಿ:187:ಸಿಎಸ್‌ಎಲ್:2000(2)ನೇ ಸಂಖ್ಯೆಯ ಅಧಿಸೂಚನೆ;

47. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಮೆ: ಶ್ರೀ ಸತ್ಯಸಾಯಿ ಹೈಯರ್ ಮೆಡಿಕಲ್ ಸೈನ್ಸಸ್ ಸಂಸ್ಥೆಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆಯಲ್ಲಿ ಬಳಸುವ

ಯೋಗ್ಯವಾದ ಸರಕುಗಳು, ಪ್ರಯೋಗಾಲಯ, ಯಾಂತ್ರಿಕ ಉಪಕರಣಗಳು ಮತ್ತಿತರ ಸರಕುಗಳ ಪ್ರವೇಶದಲ್ಲಿ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ವಿನಾಯಿತಿ ನೀಡಿ ದಿನಾಂಕ 21.03.2001ರಂದು ಹೊರಡಿಸಲಾದ ಎಫ್‌ಡಿ:25:ಸಿಎಸ್‌ಎಲ್:2001(2)ನೇ ಸಂಖ್ಯೆಯ ಅಧಿಸೂಚನೆ;

೧೯೩೨ರ ಮೈಸೂರು ಋಣ ತೆರಿಗೆ ಅಧಿನಿಯಮ ೧೦(೨)ರ ಪ್ರಕರಣದ ಮೇರೆಗೆ:

48. ಬೆಂಗಳೂರು ಹಾಗೂ ಮೈಸೂರು ನಗರದ ಪರವಾನಗಿದಾರರು ಟೊಟಲ್‌ನೇಟರ್ ತೆರಿಗೆ ಪಾವತಿಯಲ್ಲಿ 2001ರ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ ನಿಗಧಿಪಡಿಸುವ ಸಂಬಂಧದಲ್ಲಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:14:ಸಿಆರ್‌ಸಿ:2001ನೇ ಸಂಖ್ಯೆಯ ಅಧಿಸೂಚನೆ;

೧೯೭೬ರ ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ ೩೩ರ ಪ್ರಕರಣದ ಮೇರೆಗೆ:

49. ಸೈನಿಕ ದಳದಲ್ಲಿರುವ ಯೋಧ ಸದಸ್ಯರುಗಳು ಪಾವತಿಸಬೇಕಾದ ವೃತ್ತಿ ತೆರಿಗೆಯಲ್ಲಿ ವಿನಾಯಿತಿ ನೀಡಿ ದಿನಾಂಕ 31.03.2001ರಂದು ಹೊರಡಿಸಲಾದ ಎಫ್‌ಡಿ:4ಸಿಪಿಟಿ:2001ರ ಅಧಿಸೂಚನೆ;

೧೯೬೫ರ ಕರ್ನಾಟಕ ಅಬಕಾರಿ ಕಾಯ್ದೆ ೭೧(೪)ರ ಪ್ರಕರಣದ ಮೇರೆಗೆ:

50. 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮ 3 ಮತ್ತು 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 22.02.2001ರಂದು ಹೊರಡಿಸಲಾದ ಎಫ್‌ಡಿ:2:ಪಿಇಎಸ್:2001ನೇ ಸಂಖ್ಯೆಯ ಅಧಿಸೂಚನೆ;

51. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (ತಿದ್ದುಪಡಿ) ನಿಯಮಗಳು, ನಿಯಮ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 23.02.2001ರಂದು ಹೊರಡಿಸಲಾದ ಎಫ್‌ಡಿ:16:ಪಿಇಎಸ್:2000ನೇ ಸಂಖ್ಯೆಯ ಅಧಿಸೂಚನೆ;

ಭಾರತ ಸಂವಿಧಾನದ ಅನುಚ್ಛೇದ ೩೨೩(೨)ರ ಮೇರೆಗೆ:

52. ಕರ್ನಾಟಕ ಲೋಕ ಸೇವಾ ಆಯೋಗದ 1999-2000ನೇ ಸಾಲಿನ ವಾರ್ಷಿಕ ವರದಿ;

೧೯೬೪ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆಯ ೧೭(೩)ರ ಪ್ರಕರಣದ ಮೇರೆಗೆ:

53. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ

2001-2002ನೇ ಸಾಲಿನ ವಾರ್ಷಿಕ ಆಯವ್ಯಯಗಳನ್ನು ಮಂಡಿಸುತ್ತೇನೆ.

II ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು) ಅವರು:

೧೯೬೪ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ ೨೦ರ ಪ್ರಕರಣದ ಮೇರೆಗೆ

ಬಳ್ಳಾರಿ ಜಿಲ್ಲೆ ದೋಣಿಮಲೈನಲ್ಲಿರುವ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರು ತಮ್ಮ ಆಡಿಟೋರಿಯಂನಲ್ಲಿ ಕೆಲವು ಷರತ್ತುಗಳ ಮೇಲೆ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 20.06.2001ರಂದು ಹೊರಡಿಸಲಾದ ಹೆಚ್‌ಡಿ:18:ಸಿಎಸ್‌ಎ:2001ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತಿದ್ದೇನೆ.

III ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

ಶ್ರೀ ಹೆಚ್.ಕೆ. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) ಅವರ ಪರವಾಗಿ: ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೫೬ರ ಕಂಪನಿ ಕಾಯ್ದೆ ೬೧(ಎ) ಪ್ರಕರಣದ ಮೇರೆಗೆ:

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 1999-2000ನೇ ಸಾಲಿನ 6ನೇ ವಾರ್ಷಿಕ ವರದಿಯನ್ನು (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಮಂಡಿಸುತ್ತಿದ್ದೇನೆ.

IV ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರು: ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ೩೦೦(೫)ರ ಪ್ರಕರಣದ ಮೇರೆಗೆ:

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ಬೆಳಗಾಂ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ಕೊಡಗು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ.

4. ಬೀದರ್ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ.

5. ಮೈಸೂರು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿ ಆಡಳಿತ ವರದಿ.

6. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ.

7. ತುಮಕೂರು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

8. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

೧೯೯೩ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ೨೬೨(೩)ರ ಪ್ರಕರಣದ ಮೇರೆಗೆ:

9. ಕೊಪ್ಪಳ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ದೃಢೀಕರಿಸಿದ ವಾರ್ಷಿಕ ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ವರದಿ(ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

10. ಬೀದರ್ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರ ಹಾಗೂ ತನಿಖಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

11. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಆಡಿಟ್ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ)ಗಳನ್ನು ಮಂಡಿಸುತ್ತಿದ್ದೇನೆ.

V ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು) ಅವರು: ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೭೪ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಯ ೩೯(೨)ನೇ ಪ್ರಕರಣದ ಮೇರೆಗೆ:

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 1999-2000ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

VI ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

ಶ್ರೀಮತಿ ಮೋಟಮ್ಮ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) ಅವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೫೬ರ ಕಂಪನಿ ಕಾಯ್ದೆ ೬೧೯(ಎ)ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳ ವರದಿ(ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ).

೧೯೯೫ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ ೧೫ರ ಪ್ರಕರಣದ ಮೇರೆಗೆ:

2. ಕರ್ನಾಟಕ ರಾಜ್ಯ ಮಹಿಳಾ ಆಯೋಗದ 1996-97 ಹಾಗೂ 1997-98ನೇ ಸಾಲುಗಳ ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಗಳನ್ನು ಮಂಡಿಸುತ್ತಿದ್ದೇನೆ.

VII ಶ್ರೀ ಮಲ್ಲಿಕಾರ್ಜುನ ಖರ್ಗೆ:

ಶ್ರೀ ಬಿ.ಬಿ.ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು) ಅವರ ಪರವಾಗಿ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೮೭ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ೪೯ನೇ ಪ್ರಕರಣದ ಮೇರೆಗೆ:

1. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿ.

2. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿ.

3. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತಿದ್ದೇನೆ.

VIII ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೮೩ರ ಕರ್ನಾಟಕ ಶಿಕ್ಷಣ ಅಧಿನಿಯಮ (೧೯೯೫ ಕರ್ನಾಟಕ ಅಧಿನಿಯಮ-೧) ೧೪೫(೪)ರ ಪ್ರಕರಣದ ಮೇರೆಗೆ:

ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕರ್ತವ್ಯಗಳ ನಿರ್ವಹಣೆಯನ್ನು ಹಂಚಿಕೆ ಮಾಡಿ ದಿನಾಂಕ 15.03.2001ರಂದು ಹೊರಡಿಸಲಾದ ಇಡಿ:145:ಏಖಧ:98ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

IX ಶ್ರೀಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಶ್ರೀ ಎಂ.ಧರ್ಮಸಿಂಗ್(ಲೋಕೋಪಯೋಗಿ ಸಚಿವರು) ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೫೬ರ ಕಂಪನಿ ಕಾಯ್ದೆ ೬೧೯(ಎ)ರ ಪ್ರಕರಣದ ಮೇರೆಗೆ:

ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ 1999-2000ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

X ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೭೩ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮದ ೨೪ನೇ ಪ್ರಕರಣದ ಮೇರೆಗೆ:

ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ 1999-2000ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

XI ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು) ಅವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೫೭ರ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆಯ ೧೬(೨)ರ ಪ್ರಕರಣದ ಮೇರೆಗೆ:

1. ಬೆಂಗಳೂರು ವೆಸ್ಟ್ ಲಯನ್ಸ್ ಹಾಸ್ಪಿಟಲ್ ಅಂಡ್ ಕಾರ್ಡಿಯಾ ಗ್ರಾಫ್ಟಿಂಗ್ ಸೆಂಟರ್ ನಂ.56.2 ಲಯನ್ಸ್ ಹಾಸ್ಪಿಟಲ್ ರೋಡ್ ಬೆಂಗಳೂರು ಇವರು ಹೊಂದಿರುವ ವಾಹನ ಸಂಖ್ಯೆ: ಕೆಎ-01-ಎ-3042 ಸ್ವರಾಜ್ ಮಜ್ದಾ ವಾಹನಕ್ಕೆ ಕರ್ನಾಟಕಕ್ಕೆ ಮೋಟಾರು

ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 09.01.2000ರಂದು ಹೊರಡಿಸಲಾದ ಜಿಸಾಇ:4:ಟಿಯಂಟಿ:2001ರ ಅಧಿಸೂಚನೆ;

೧೯೫೦ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ ೩೫(೨)ರ ಪ್ರಕರಣದ ಮೇರೆಗೆ:

2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 1998-99ನೇ ಸಾಲಿನ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ವಿವರಣೆಯೊಂದಿಗೆ);

3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ (ವಿಳಂಬಕ್ಕೆ ಕಾರಣದ ವಿವರಣೆಯೊಂದಿಗೆ);

೧೯೫೦ರ ರಸ್ತೆ ಸಾರಿಗೆ ನಿಗಮಗಳ ಕಾಯ್ದೆ ೩೫(೪)ರ ಪ್ರಕರಣದ ಮೇರೆಗೆ:

4. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 1999-2000ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ವಿವರಣೆಯೊಂದಿಗೆ)ಗಳನ್ನು ಮಂಡಿಸುತ್ತಿದ್ದೇನೆ.

XII ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೫೬ರ ಕಂಪನಿ ಕಾಯ್ದೆ ೬೧೭(ಎ)ರ ಪ್ರಕರಣದ ಮೇರೆಗೆ:

ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ 1999-200ನೇ ಸಾಲಿನ 20ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

XIII ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) ಅವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

೧೯೬೨ರ ಕರ್ನಾಟಕ ಗೃಹ ಮಂಡಳಿ ಅಧಿನಿಯಮ ೫೫(೩)ರ ಪ್ರಕರಣದ ಮೇರೆಗೆ:

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ 1997-98 ಮತ್ತು 1998-99ನೇ ಸಾಲುಗಳ ಲೆಕ್ಕಪತ್ರಗಳ ತನಿಖಾ ವರದಿ (ವಿಳಂಬಕ್ಕೆ ಕಾರಣದ ವಿವರಣೆಯೊಂದಿಗೆ) ಯನ್ನು ಮಂಡಿಸುತ್ತಿದ್ದೇನೆ.

XIV ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರ ಪರವಾಗಿ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ;

2. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 1999-2000ನೇ ಸಾಲಿನ 54ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

3. ಎನ್‌ಜಿಇಎಫ್ ನಿಯಮಿತದ 1999-2000ನೇ ಸಾಲಿನ 35ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

XV ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

ಶ್ರೀ ಡಿ.ಬಿ.ಚಂದ್ರೆಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಅವರ ಪರವಾಗಿ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಅಧಿನಿಯಮ (ಕರ್ನಾಟಕ ಅಧಿನಿಯಮ 1986ರ 22) 26(2) ಮತ್ತು 24(3)ರ ಪ್ರಕರಣದ ಮೇರೆಗೆ:

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲಕ್ಕೆ ಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):

XVI ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) ಅವರ ಪರವಾಗಿ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಗಣಿಗಾರಿಕೆ ಕಂಪನಿ ಕಾಯ್ದೆ ೬೧೯(ಎ)ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 1999-2000ನೇ ಸಾಲಿನ 27ನೇ ವಾರ್ಷಿಕ ವರದಿ;

2. ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ 1999-2000ನೇ ಸಾಲಿನ 25ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ) ಗಳನ್ನು ಮಂಡಿಸುತ್ತಿದ್ದೇನೆ.

XVII ಡಾ.ಜಿ.ಪರಮೇಶ್ವರ್(ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೭೬ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ೪೨(೩)ರ ಪ್ರಕರಣದ ಮೇರೆಗೆ:

1. ಕರ್ನಾಟಕ ವಿಶ್ವವಿದ್ಯಾಲಯದ 1998-99ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆಯ ಅನುಸರಣಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

2. ಮಂಗಳೂರು ವಿಶ್ವವಿದ್ಯಾಲಯದ 1998-99ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

3. ಬೆಂಗಳೂರು ವಿಶ್ವವಿದ್ಯಾಲಯದ 1998-99ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

4. ಗುಲ್ಬರ್ಗಾ ವಿಶ್ವವಿದ್ಯಾಲಯದ 1997-98 ಮತ್ತು 1998-99ನೇ ಸಾಲುಗಳ ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

೧೯೭೬ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ೪೫(೨)ನೇ ಪ್ರಕರಣದ ಮೇರೆಗೆ:

5. ಕುವೆಂಪು ವಿಶ್ವವಿದ್ಯಾಲಯದ 1999-2000ನೇ ಸಾಲಿನ ವಾರ್ಷಿಕ ವರದಿ;

6. ಮಂಗಳೂರು ವಿಶ್ವವಿದ್ಯಾಲಯದ 1999-2000ನೇ ಸಾಲಿನ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ);

7. ಗುಲ್ಬರ್ಗಾ ವಿಶ್ವವಿದ್ಯಾಲಯದ 1998-99 ಮತ್ತು 1999-2000ನೇ ಸಾಲುಗಳ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣದ ಟಿಪ್ಪಣಿಯೊಂದಿಗೆ)ಗಳನ್ನು ಮಂಡಿಸುತ್ತಿದ್ದೇನೆ.